ಶ್ರೀ ಸಿ. ಬೈರೇಗೌಡ :– ಮಾನ್ಯ ಅಧ್ಯಕ್ಷರೇ, ನಾನು ಈ ಇಲಾಖಾ ಮಂತ್ರಿಯಾಗಿದ್ದೆ. ಆಗ ಸುಮಾರು 4 ಕೋಟಿ ರೂಪಾಯಿಗಳ ಖರ್ಚಿನಲ್ಲಿ ಇಲಾಖೆಯವರೇ ಒಂದು ಡ್ರೆಜಿಂಗ್ ಮಷಿನ್ ಕೊಂಡುಕೊಂಡು ಹಳೆ ಬಂದರಿನಲ್ಲಿ ಹೂಳು ಎತ್ತುವುದರ ಜೊತೆಗೆ ಪಶ್ಚಿಮ ಕರಾವಳಿಯ ಕೆಲವು ಬಂದರುಗಳಲ್ಲಿ ಹೂಳು ಎತ್ತಲು ಅನುಕೂಲವಾಗುತ್ತದೆಂದು ಹೇಳಿ 4 ಕೋಟಿ ರೂಪಾಯಿಗಳಲ್ಲಿ ಇಲಾಖೆಯವರೇ ಒಂದು ಡ್ರಜ್ಜರ್ ಯಂತ್ರವನ್ನು ಕೊಂಡುಕೊಳ್ಳುವ ಅಂದಾಜು ಇತ್ತು, ಈಗ ಆ ಅಂದಾಜು ಏನಾಗಿದೆ? ರಾಜ್ಯ ಸರ್ಕಾರ ಡ್ರೆಡ್ಜರ್ ಕೊಂಡುಕೊಳ್ಳುತ್ತದೆಯೋ ಅಥವಾ ಇಲ್ಲವೇ ಎನ್ನುವುದನ್ನು ತಿಳಿಸಬೇಕು.

ಏಕೆಂದರೆ, ಕಾಂಪನ್‌ಸೇಷನ್ ಕೊಡುವುದು ಬೇರೆ. ಮೂಲ ಸಮಸ್ಯೆ ಇರತಕ್ಕಂಥಾದ್ದು ಡ್ರೆಡ್ಜರ್ ಮಾಡದೇ ಇರುವುದು. ಈ ಮೂಲ ಸಮಸ್ಯೆಯನ್ನು ಬಗೆಹರಿಸಬೇಕಾದರೆ ಡ್ರೆಡ್ಜರ್ ಕೊಂಡುಕೊಳ್ಳಬೇಕಾಗುತ್ತದೆ. ಅದಕ್ಕೆ ತಾವು ಆಲೋಚನೆ ಮಾಡಿ ಡ್ರೆಡ್ಜರ್ ಕೊಂಡುಕೊಳ್ಳುವುದಕ್ಕೆ ಏನು ಹೇಳುತ್ತೀರಾ ?

ಶ್ರೀ ಕೆ. ಜೆ. ಜಾರ್ಜ್ :– ಮಾನ್ಯ ಅಧ್ಯಕ್ಷರೇ, ಬಹುಶಃ ಬೈರೇಗೌಡರು ಮೊನುಗಾರಿಕೆ ಮಂತ್ರಿಯಾಗಿದ್ದಾಗ ಆ ಡ್ರಜ್ಜರ್‌ನ್ನು ಕೊಂಡುಕೊಂಡಿದ್ದಿದ್ದರೆ ಇವತ್ತು ಇಷ್ಟು ಕಷ್ಟ ಬರುತ್ತಿರಲಿಲ್ಲ. ಅವರು ಯೋಜನೆ ಹಾಕಿ ಹೋಗಿದ್ದಾರೆಯೇ ಹೊರತು ಬೇರೆ ಏನೂ ಮಾಡಿಲ್ಲ. ಈಗಾಗಲೇ ನಾನು ಉತ್ತರ ಹೇಳಿದ್ದೇನೆ. ಆದಷ್ಟು ಬೇಗ ಇದನ್ನು ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆಂದು ಹೇಳಿದ್ದೇನೆ.

ವಿಷಯ :– ಗುತ್ತಿಗೆಗೆ ಕೊಟ್ಟಿರುವ ನಗರ ಪಾಲಿಕೆಯ ನಿವೇಶನಗಳ ಸಂಖ್ಯೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 245 (1002)

ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಳೆದ ಮೂರು ವರ್ಷಗಳಲ್ಲಿ ಗುತ್ತಿಗೆಗೆ ಕೊಟ್ಟಿರುವ ನಗರ ಪಾಲಿಕೆಯ ನಿವೇಶನಗಳೆಷ್ಟು (ನಿವೇಶನಗಳ ಅಳತೆ ಮತ್ತು ಗುತ್ತಿಗೆಯ ವಿವರಗಳನ್ನು ಒದಗಿಸುವುದು) ?

ಬ) ಗುತ್ತಿಗೆ ನೀಡಿರುವ ಸ್ವತ್ತುಗಳಿಗೆ ನಿಗದಿಪಡಿಸಿರುವ ದರ ?

ಶ್ರೀ ಕೆ. ಜೆ. ಜಾರ್ಜ್ :– (ವಸತಿ ಮತ್ತು ನಗರಾಭಿವೃದ್ಧಿ ಸಚಿವರು)

ಅ) 19.

ನಿವೇಶನಗಳ ಅಳತೆ ಮತ್ತು ಗುತ್ತಿಗೆಯ ವಿವರಗಳನ್ನು ಅನುಬಂಧವಲ್ಲಿ ಒದಗಿಸಲಾಗಿದೆ.

ಬ) ಅನುಬಂಧದಲ್ಲಿ ನಮೂದಿಸಲಾಗಿದೆ.

STATEMENT SHOWING THE NUMBER OF CORPORATION LANDS LEASED DURING THE YEAR 1988

Sl.No.	Name of the Lessee	Location of the Leased Land	Period of lease	Lease Amount	Dimension	Remarks purpose
1	2	3	4	5	6	7
			Lands leased during the year 1988			
1	M/s. Sanjevani	Queens Road	30 years w. e. f. 4-6-88	Rs. 450-00 P.M.	30'X32'	For Construction of Building
2	Smt. Lakshamma	Robertson Road	3 years w. e. f. 4-6-88	Rs. 25-00 P.M.	20'X8'	Margin land
3	Smt. Venbayamma Temple	-do-	30 years w. e. f. 4-6-88	Rs. 1-00 P.A.	650 Sq. Feet	For Construction of Temple.
4	M/s. Karnataka Milk Federation-Bangalore Dairy.	H.B.T Road Ad. Joining Taj Shadi Mahal.	1 year w. e. f. 16-7-88	Rs. 200-00 P.A.	8'X8'	For construction of Milk Booth.
5	Smt. Suguna Subramanyam	No. 26/1, Jayarajanagar Ulsoor.	3 years w. e. f. 20-7-88	Rs. 300-00 P.A.	20'X28'	For construction of Building
6	The Secretary, Sree Yadava (Gollara)Sangha.	Ulsoor Tank Bund Road	3 years w. e. f. 29-11-88	Rs.100-00 P.M.	60'X10'	For construction of Office Building.
7	Sri M. Venkateshalu	Dayananda Nagar	5 years w. e. f. 7-12-88	Rs.100-00 P.M.	18'X	For construction of Building.
8	The President, Bharatiya Janatha Party	Near Railway Bridge, 5-6th Cross, Malleswaram.	99 years w. e. f. 21-12-88	Rs.500/- P.A.	5834 Sq.ft.	For construction of Office Buildings.

LANDS LEASED DURING THE YEAR 1989

1	Kannada & Cultural Department	Mibler Tank Bed (For construction of Dr. Ambedkar Bhavan)	50 years w. e. f. 12–4–89	Rs. 1000/– P.M.	174' +248'X295' +292' / 2 / 2	For construction of Dr. Ambedkar Bhavan
2	M/s. Hindustan Petrolium Corporation Ltd.	46th cross, Jayanagar	5 years w. e. f. 24–6–89	Rs. 6000/– P.M.	100'X102'	Agreement executed has not been given effect. The land is claimed by BDA as CA site. Alternative site has been proposed
3	Sri Abdul Basith	Narasimha Raja Road Cross, Near Slaughter House.	5 years w. e. f. 24–7–1989	Rs.120/– P.M.	15'X8'	For running Scrap Business.

Land Ruls & Cops Leased During the year 1990

1	Sri Syed Pasha Ouadri	Rest House Cerscent Road	3 years w. e. f. 17–3–90	Rs.1,000–00P.M.	4X3 Mtrs.	For Construction of Shop.
2	Smt. Shamala Reddy	Rest House Crescent Road	5 years w. e. f. 30–3–90	Rs.1,000–00P.M.	4X2.5 Mtrs.	For Construction of Shop.
3	Smt. Guna Sundari	Rest House Crescent Road	5 years w. e. f. 31–3–90	Rs.1,000–00P.M.	4X2.5 Mtrs.	For Construction of Shop.
4	M/s. Pragathi Vedike	Baneerghatta Road, near Bangalore Dairy	5 years w. e. f. 1–4–90	Rs.1,500–00 P.M.	15' +32X175' / 2	The Agreement has not been given effect, since objections were received to cancel the lease. The Divisional

1	2	3	4	5	6	7
						Councillor also suggest that this land be utilised for construction of Dr. Ambedkar Bhavan.
5	M/s. Vijayalakshmi Automobiles.	Bannerghatta Road, near Bangalore Dairy	5 years w. e. f. 1-4-90	Rs.1,500-00P.M.	15' + 33'XX150' / 2	The agreement has not been given effect, since objections were received to cancel the lease. The Divisional Councillor also suggests that this land be utilised for construction of Dr. Ambedkar Bhavan
6	Sri Karumariyamma, Ganapathy, Subramanya Swamy Temple.	Dayananda Nagar, 2nd & 3rd Cross, Sriramapuram.	5 years w. e. f. 1-4-1990	Rs.100-00P.M.	67'9'X'58'	For Construction of Temple.
7	Smt. Estheramma	Munivenkatappa Garden.	3 years w. e. f. 9-5-1990	Rs.180-00 P.A.	14'X26'	For Construction of Building.
8	PRESS TRUST OF INDIA	Miller Tank Bed	30 years 1990	Rs.1,800-00 P.M.	125'X250'	For Construction of Administrative Offices and Press Sanctioned in G.O.No, HUD 26 MNG 89 dated 17-7-1990 Agreement to be executed.

ಶ್ರೀ ಸಾದತ್ ಅಲೀ ಖಾನ್ : ಮಾನ್ಯ ಅಧ್ಯಕ್ಷರೇ, ಕಾರ್ಪೊರೇಷನ್‌ನವರು ಸುಮಾರು 18 ಸೈಟ ಗಳನ್ನು ಲೀಸ್‌ಗೆ ಕೊಟ್ಟಿದ್ದಾರೆ. ಈ ಸೈಟುಗಳು ಇವತ್ತಿನ ಬೆಲೆಯಲ್ಲಿ 20 ಕೋಟಿ ರೂಪಾಯಿಗಳಾಗಬಹುದು. ಈ 20 ಕೋಟಿ ರೂಪಾಯಿ ಬೆಲೆ ಬಾಳುವ ಸೈಟುಗಳಿಂದ ಒಂದು ತಿಂಗಳಿಗೆ ಕಾರ್ಪೊರೇಷನ್‌ಗೆ ಬರುತ್ತಿರುವ ಆದಾಯ 16,370 ರೂಪಾಯಿಗಳು ಮಾತ್ರ. ಈ ಸೈಟುಗಳನ್ನು 3 ವರ್ಷಕ್ಕೆ ಲೀಸ್ ಹಾಕಿಕೊಟ್ಟಿದ್ದಾರೆ. 5 ವರ್ಷಗಳವರೆಗೆ ಕೊಡುವುದಕ್ಕೆ ಕಾರ್ಪೊರೇಷನ್‌ಗೆ ಅಧಿಕಾರ ಇದೆ. ಆದರೆ ಸರ್ಕಾರದಿಂದ ಯಾವುದೇ ಅನುಮತಿ ಪಡೆಯದೆ 3 ವರ್ಷದಿಂದ 5 ವರ್ಷಗಳ ವರೆಗೆ ಕೊಟ್ಟಿದ್ದಾರೆ. ನಾನು ಕೇಳುವುದೇನೆಂದರೆ, ಬಿಲ್ಡಿಂಗ್‌ನ್ನು ಕನ್‌ಸ್ಟ್ರಕ್ಟ್ ಮಾಡುವುದಕ್ಕೆ ಸುಮಾರು 2 ವರ್ಷಗಳು ಬೇಕಾಗುತ್ತದೆ. ಪುನಃ ಲೀಸ್ ಕಂಪ್ಲೀಟ್ ಆದ ಮೇಲೆ ವಾಪಸ್ ತೆಗೆದುಕೊಳ್ಳುತ್ತೀರೋ ? ಅಥವಾ ಎಕ್ಸ್‌ಟೆಂಡ್ ಮಾಡುತ್ತೀರೋ ? ಯಾವ ರೀತಿ ಮಾಡು ತ್ತೀರೆಂದು ತಾವು ಉತ್ತರ ಕೊಡಬೇಕು.

ಶ್ರೀ ಕೆ. ಜೆ. ಜಾರ್ಜ್ :– ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ 19 ಸೈಟುಗಳನ್ನು ಬೆಂಗಳೂರು ಮಹಾನಗರ ಪಾಲಿಕೆಯಿಂದ ಈ ತರಹ ಗುತ್ತಿಗೆಗೆ ಕೊಟ್ಟಿದ್ದಾರೆ. ಬೇರೆ ಬೇರೆ ಸಂಘ ಸಂಸ್ಥೆಗಳಿಗೆ ಇವುಗಳನ್ನು ಕೊಟ್ಟಿದ್ದಾರೆ. ಇದು 20 ಕೋಟಿ ರೂಪಾಯಿಗಳ ಆಸ್ತಿ ಎಂದರೆ, ಇವುಗಳನ್ನು ಪ್ರೈವೇಟ್‌ನವರಿಗೆ ಕೊಡಲಿಲ್ಲ. ಪ್ರೈವೇಟ್‌ನವರಿಗೂ ಕೊಟ್ಟಿದ್ದರೂ ಸಣ್ಣ ಸಣ್ಣ ಸೈಟುಗಳನ್ನು ಮಾತ್ರ ಕೊಡಲಾಗಿದೆ. ಪ್ರೆಸ್ ಟ್ರಸ್ಟ್ ಆಫ್ ಇಂಡಿಯಾದವರಿಗೆ ಕೊಟ್ಟಿದ್ದಾರೆ. ಡಾ. ಅಂಬೇಡ್ಕರ್ ಭವನ ಕಟ್ಟಲಿಕ್ಕೆ ಕೊಟ್ಟಿದ್ದಾರೆ. ಈ ತರಹ ಕೊಟ್ಟಿದ್ದಾರೆಯೇ ಹೊರತು, ಯಾವುದೇ ವೈಯಕ್ತಿಕವಾಗಿ, ಖಾಸಗೀಯವರಿಗೆ ಹೆಚ್ಚಿಗೆ ಕೊಟ್ಟಿರುವುದು ಕಾಣುವುದಿಲ್ಲ. ನಗರಸಭೆಯವರಿಗೆ 3 ವರ್ಷಗಳವರೆಗೆ ಲೀಸ್ ಕೊಡುವುದಕ್ಕೆ ಅಧಿಕಾರ ಇದೆ. ಲೀಸ್ ಪಿರಿಯಡ್‌ನ್ನು ಹೆಚ್ಚಿಗೆ ಮಾಡಬೇಕಾದರೆ ಸರ್ಕಾರಕ್ಕೆ ಬರುತ್ತದೆ. ಸರ್ಕಾರ ಅದಕ್ಕೆ ಅನುಮತಿ ಕೊಡಬೇಕಾಗುತ್ತದೆ.

ವಿಷಯ :– ತ್ರಿಭಾಷಾ ಸೂತ್ರವನ್ನು ಕಾರ್ಯರೂಪಕ್ಕೆ ತಂದಿರುವುದರ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 246 (1205)

ಶ್ರೀ ಸುಭಾಷ್ ಜೋಷಿ (ನಿಪ್ಪಾಣಿ) :– ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತ್ರಿಭಾಷಾ ಸೂತ್ರವನ್ನು ಕಾರ್ಯರೂಪಕ್ಕೆ ತಂದಿರುವುದರಿಂದ ರಾಜ್ಯದ ಕನ್ನಡೇತರ ವಿದ್ಯಾರ್ಥಿಗಳ ಮೇಲೆ ಉಂಟಾಗಿರುವ ಪರಿಣಾಮಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದರೆ, ಸರ್ಕಾರದ ಈ ನೀತಿಯನ್ನು ಬದಲಾಯಿಸಲಾಗುತ್ತದೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು) :–

ಅ) ತ್ರಿಭಾಷಾ ಸೂತ್ರವನ್ನು ಅನುಷ್ಠಾನಕ್ಕೆ ತಂದಿರುವುದರಿಂದ ರಾಜ್ಯದ ಕನ್ನಡೇತರ ವಿದ್ಯಾರ್ಥಿಗಳ ಮೇಲೆ ಯಾವ ಪರಿಣಾಮವೂ ಉಂಟಾಗುವುದಿಲ್ಲ.

ಆ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

Sri Subhash Joshi :– Whether the three language Policy has been changed this year and if it is changed, why ? Whether it has come to the notice of the Government that there is discriminaton between the students ?

12–20 ಪಿ. ಎಂ.

ಶ್ರೀ ಎಂ. ವೀರಪ್ಪ ಮೊಯಿಲಿ :– ಸನ್ಮಾನ್ಯ ಅಧ್ಯಕ್ಷರೇ, ಹಿಂದೆ ಗೋಕಾಕ್ ಸಮಿತಿ ವರದಿ ಆಧಾರದ ಮೇಲೆ ಭಾಷಾ ನೀತಿಯನ್ನು, ಈ ಶಿಕ್ಷಣ ಮಾಧ್ಯಮದ ವಿಚಾರದಲ್ಲಿ ಏನು ರೂಪಿಸಿದ್ದರೋ ಅದು ಉಚ್ಚ ನ್ಯಾಯಾಲಯದಲ್ಲಿ ಬಂತು. ಆಮೇಲೆ ಅದರಲ್ಲಿ ಬದಲಾವಣೆ ಆಗಿ ಸರ್ವೋಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಯನ್ನು ಸರ್ಕಾರದಿಂದ ಸಲ್ಲಿಸಿದ್ದೇವೆ. ಅಲ್ಲಿ ತೀರ್ಪಿಗಾಗಿ ಬಾಕಿ ಇದೆ. ಆದರೆ, ಈ ಮಧ್ಯೆ ಈ ಭಾಷಾ ಮಾಧ್ಯಮದ ವಿಚಾರದಲ್ಲಿ ಶೂನ್ಯತೆ ಬರಬಾರದೆಂದು ಹೇಳಿ ಒಂದು ಹೊಸ ತಾತ್ಕಾಲಿಕ ನೀತಿಯನ್ನು ನಾವು 89 ರಲ್ಲಿ ಒಂದು ಸರ್ಕಾರಿ ಆದೇಶದ ಪ್ರಕಾರ ಜಾರಿಗೆ ತರಲಾಗಿದೆ. ಅದು 89–90 ರ ಶೈಕ್ಷಣಿಕ ವರ್ಷದಿಂದ ಈ ಭಾಷಾ ನೀತಿ ಜಾರಿಗೆ ಬಂದಿದೆ. ಇದು ತಾತ್ಕಾಲಿಕವಾದ ನೀತಿ. ಆದರೆ ಸಮಗ್ರವಾದಂತಹ, ಸ್ಪಷ್ಟವಾದ